**ಓ ಎಸ್ ನಂಃ 98/2017**
**ಪಿ ಡಬ್ಲ್ಯೂ ಃ 1**

**ದಿಃ 21.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಲ್ ಪಿ ಎಸ್ ವಕೀಲರಿಂದಃ**

ಈ ದಾವೆಯಲ್ಲಿ ಪ್ರತಿವಾದಿಗಳು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿರುವ ಸಂಗತಿಗಳನ್ನು ನಾನು ತಿಳಿದುಕೊಂಡಿರುತ್ತೇನೆ. ತಮ್ಮ ತಂದೆಯ ಜೀವಿತಾವಧಿಯಲ್ಲಿ ತಮ್ಮ ತಂದೆ ಹಾಗೂ ಅವರ ಸಹೋದರರ ಮಕ್ಕಳಾದ ಗುಜ್ಜಪ್ಪ, ಹನುಮಂತಯ್ಯ ರವರು ದಿಃ 10.08.1965 ರಲ್ಲಿ ತಮ್ಮ ಕುಟುಂಬಕ್ಕೆ ಆಸ್ತಿಗಳನ್ನು ಮೌಖಿಕವಾಗಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ತಮಗೂ ಸಹ ಹಿಸ್ಸೆ ಬಂದಿದೆ ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ಸರ್ವೆ ನಂ. 41/1 ಪಿ ರಲ್ಲಿ 10 ಗುಂಟೆ ಜಮೀನು, ಸರ್ವೆ ನಂ. 43/3 ರಲ್ಲಿ 30 ಗುಂಟೆ ಜಮೀನು, ಸರ್ವೆ ನಂ. 46/4 ರಲ್ಲಿ 10 ಗುಂಟೆ ಜಮೀನು, ಸರ್ವೆ ನಂ. 45/2 ರಲ್ಲಿ 0.04 ಗುಂಟೆ ಜಮೀನು, ಸರ್ವೆ ನಂ. 45/1 ರಲ್ಲಿ 0.03 ಗುಂಟೆ ಜಮೀನು, ಸರ್ವೆ ನಂ. 41/1 ರಲ್ಲಿ 0.04 ಗುಂಟೆ ಜಮೀನು, ಸರ್ವೆ ನಂ. 73/2 ರಲ್ಲಿ 0.04 1/2 ಗುಂಟೆ ಜಮೀನು, ಸರ್ವೆ ನಂ. 56 ರಲ್ಲಿ 34 ಗುಂಟೆ ಜಮೀನು, ಸರ್ವೆ ನಂ. 35/10 ರಲ್ಲಿ 5 ಗುಂಟೆ ಜಮೀನು, ಸರ್ವೆ ನಂ. 37/2 ರಲ್ಲಿ 2 ಎಕರೆ 2 ಗುಂಟೆ ಜಮೀನು ಮತ್ತು ಖಾನೇಷುಮಾರಿ ಜಮೀನಿನಲ್ಲಿರುವ ಮನೆಯು ತಮ್ಮ ಹಿಸ್ಸೆಗೆ ಬಂದಿದೆ ಎಂದರೆ ಸರಿಯಲ್ಲ. ವಿಭಾಗದ ಪ್ರಕಾರ ಮೇಲ್ಕಂಡ ಆಸ್ತಿಗಳ ಖಾತೆಯು ತಮ್ಮ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ನಾವು ಮತ್ತು ಪ್ರತಿವಾದಿಗಳು ಈಗಲು ಸಹ ಒಟ್ಟು ಕುಟುಂಬದಲ್ಲಿ ಇದ್ದೇವೆ. ಪಹಣಿಗಳಲ್ಲಿ ತಮ್ಮ ಹೆಸರು ನಮೂದಾಗಿದ್ದು ಸದರಿ ವಿಚಾರ ಸುಳ್ಳು ಎಂದು ತಾವೇನಾದರೂ ಸದರಿ ಪಹಣಿ ಪತ್ರಿಕೆಗಳನ್ನು ಸಕ್ಷಮ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿದ್ದೀರ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ತಮಗೆ ವಿಭಾಗದ ಮೂಲಕ ಬಂದಿರುವ ಆಸ್ತಿಗಳಲ್ಲಿ ಕೆಲವೊಂದು ಆಸ್ತಿಗಳನ್ನು ಈಗಾಗಲೇ ಬೇರೆಯವರಿಗೆ ಮಾರಾಟ ಮಾಡಿದ್ದೀರಿ ಎಂದರೆ ಸರಿಯಲ್ಲ. ತಮಗೆ ವಿಭಾಗದ ಮೂಲಕ ಬಂದಿರುವ ಆಸ್ತಿಗಳನ್ನು ಹೊರತು ಪಡಿಸಿ ಬೇರೆ ಆಸ್ತಿಗಳನ್ನು ವಿಭಾಗದ ಮೂಲಕ ಹೋಗಿದೆ ಎಂದರೆ ಸರಿಯಲ್ಲ. ಚಿಕ್ಕಗಂಗಯ್ಯನವರ ಹಿಸ್ಸೆಗೆ ಬಂದಿರುವ ಸ್ವತ್ತುಗಳ ಆತನ ಹೆಸರಿಗೆ ಖಾತೆ ಆಗಿದ್ದು ಆತನ ಪೌತಿ ನಂತರ ಆತನ ಹೆಂಡತಿ ಮಕ್ಕಳ ಹೆಸರಿಗೆ (1 ರಿಂದ 4 ನೇ ಪ್ರತಿವಾದಿಗಳು) ಖಾತೆ ಆಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಗಳು ಮತ್ತು ಪ್ರತಿವಾದಿಗಳು ಈಗಾಗಲೇ ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸೇರಿದ

ಓ ಎಸ್ ನಂಃ 98/2017
ಪಿ ಡಬ್ಲ್ಯೂ ಃ 1

ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ತಾವು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಓ

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**